ನನ್ನ ಜನ್ಮ ಭೂಮಿ ಮಂಡ್ಯದಲ್ಲಿ ಕೃಷಿ ವಿವಿ ಸ್ಥಾಪನೆಯ ಹರ್ಷ | ಕೃಷಿ ಸಚಿವನಾಗಿ ಸಂತೋಷದ ಕ್ಷಣ

ಹಳೇ ಮೈಸೂರು ಭಾಗಕ್ಕೆ ಹೊಸ ಕೃಷಿ ವಿವಿ ದಿಕ್ಸೂಚಿ



ಎನ್. ಚಲುವರಾಯಸ್ವಾಮಿ
ಕೃಷಿ ಹಾಗೂ ಮಂಡ್ಯ
ಜಿಲ್ಲಾ ಉಸ್ತುವಾರಿ ಸಚಿವ

ನನಗೆ ಲಭಿಸಿರುವ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು, ಜಿಲ್ಲೆಯ ರೈತ ಸಮುದಾಯವನ್ನು ಸಬಲೀಕರಣ ಗೊಳಿಸಬೇಕು ಹಾಗೂ ಈ ಭಾಗದ ಕೃಷಿ ವಿದ್ಯಾರ್ಥಿಗಳು ಹಾಗೂ ಅನ್ನದಾತರಿಗೆ ನೆರವಾಗಬಲ್ಲ ಕೆಲಸವನ್ನು ಮಾಡಬೇಕೆನ್ನುವ ತುಡಿತ ಜಿಲ್ಲೆಯಲ್ಲಿ ನೂತನ ಕೃಷಿ ವಿಶ್ವ ವಿದ್ಯಾಲಯವನ್ನು ನಿರ್ಮಾಣ ಮಾಡಬೇಕೆನ್ನುವ ಕನಸನ್ನು ನನಸಾಗಿಸಲು ಸಾಧ್ಯವಾಗಿಸಿತು.

ಮಂಡ್ಯ ಎಂದರೆ ಇಂಡಿಯಾವೇ ತಿರುಗಿ ನೋಡುತ್ತದೆ ಎನ್ನುವ ನಾಣ್ಣುಡಿಯನ್ನು ನಾವು ಸದಾ ನೆನಪಿಸಿಕೊಳ್ಳುತ್ತೇವೆ. ನಮ್ಮ ಜಿಲ್ಲೆ ರಾಜಕೀಯದಲ್ಲಿ ಸುದ್ದಿಯಾದಷ್ಟು ಬೇರೆ ಸಂಗತಿಗಳಿಗೆ ಸುದ್ದಿಯಾಗುತ್ತಿಲ್ಲ ಎನ್ನುವ ಕೊರಗು ನನ್ನಲ್ಲಿ ಎಂದಿಗೂ ಕಾಡುತ್ತಿರುತ್ತದೆ.

ಅಪ್ಪಟ ರೈತ ಕುಟುಂಬದಲ್ಲಿ ಹುಟ್ಟಿ ಬೆಳೆದ ನನಗೆ ನಮ್ಮ ಜಿಲ್ಲೆಯ ಕೃಷಿಯ ಬಗ್ಗೆ ಅಂದಿನಿಂದಲೂ ಒಂದು ರೀತಿಯ ಸೆಳೆತವಿದೆ. ಆದರೆ, ಕಾವೇರಿ ಜಲಾನಯನ ಪ್ರದೇಶದಲ್ಲಿ ಕೃಷಿ ಮಾಡಿ, ಜಯಿಸುವುದು ಎಂದರೆ ಅಷ್ಟು ಸುಲಭದ ಮಾತಾಗಿರಲಿಲ್ಲ. ಮಳೆ ಚೆನ್ನಾಗಿ ಬಂದು, ಕನ್ನಂಬಾಡಿ ಕಟ್ಟೆ ತುಂಬಿದರೆ ಮಾತ್ರ ಅನ್ನದಾತರ ಹೊಟ್ಟೆ ತಣ್ಣಗಿರಲು ಸಾಧ್ಯ ಎನ್ನುವ ಪರಿಸ್ಥಿತಿ ಇಂದಿಗೂ ಇದೆ.

ನನ್ನ ರಾಜಕೀಯ ಜೀವನದುದ್ದಕ್ಕೂ ಜಿಲ್ಲೆಯ ಅಭಿವೃದ್ಧಿಗಾಗಿ ಏನನ್ನಾದರೂ ಮಾಡಲೇಬೇಕು ಎನ್ನುವ ಹಂಬಲ ನನ್ನದು. ನನ್ನ ಹುಟ್ಟೂರು ಎನ್ನುವ ಕಾಳಜಿ ಒಂದು ಕಡೆಯಾದರೆ, ಈ ಜಿಲ್ಲೆಯ ಜನತೆಯ ಬವಣೆಯನ್ನು ಅತ್ಯಂತ ಹತ್ತಿರದಿಂದ ನೋಡಿದ ಅನುಭವ ಇನ್ನೊಂದು ಕಡೆ, ನನ್ನನ್ನು ಸದಾ ಅವರ ಶ್ರೇಯಕ್ಕಾಗಿ ಶ್ರಮಿಸುವಂತೆ ಮಾಡುತ್ತದೆ.

ನಮ್ಮ ಮಂಡ್ಯ ಕೇವಲ ರಾಜಕೀಯ ಸಂಗತಿಗಳಿಗಾಗಿ ಅಲ್ಲ, ಅಭಿವೃದ್ಧಿಯ ವಿಷಯಗಳಿಗಾಗಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಸುದ್ದಿ ಮಾಡಬೇಕು ಎನ್ನುವ ಕನಸನ್ನು ಬೆನ್ನಟ್ಟಿ ಓಡಲಾರಂಭಿಸಿದ ನನಗೆ ಒಮ್ಮೆ ಆರೋಗ್ಯ ಸಚಿವನಾಗುವ ಅವಕಾಶ ಲಭಿಸಿದಾಗ ಜಿಲ್ಲೆಗೆ ವೈದ್ಯಕೀಯ ಕಾಲೇಜನ್ನು ತಂದಿರುವ ಸಾರ್ಥಕತೆ ಹಾಗೂ ಸಾರಿಗೆ ಸಚಿವನಾಗುವ ಅವಕಾಶ ಲಭಿಸಿದಾಗ ಕೆಎಸ್ಆರ್‌ಟಿಸಿ ವಿಭಾಗವನ್ನು ಆರಂಭಿಸುವ ಮೂಲಕ ಜಿಲ್ಲೆಯ ಜನತೆಗೆ ಸಾರಿಗೆ ಸಂಪರ್ಕ ಸೌಭಾಗ್ಯವನ್ನು ಕಲ್ಪಿಸಿರುವ ಧನ್ಯತೆಯ ಜೊತೆ ಇದೀಗ ಕೃಷಿ ಸಚಿವನಾಗಿ ಜಿಲ್ಲೆಯಲ್ಲಿ ನೂತನ ಕೃಷಿ ವಿಶ್ವ ವಿದ್ಯಾಲಯವನ್ನು ಆರಂಭಿಸುವ ಸದವಕಾಶ ಲಭಿಸಿರುವುದು ನನ್ನ ಸೌಭಾಗ್ಯ. ನಾನು ಹುಟ್ಟಿ ಬೆಳೆದ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ, ಜನತೆಯ ಕಲ್ಯಾಣಕ್ಕೆ ಶ್ರಮಿಸುವ, ಈ ಮಣ್ಣಿನ ಋಣ ತೀರಿಸುವ ಸುವರ್ಣಾವಕಾಶವೆಂದು ಭಾವಿಸಿ, ಕೆಲಸ ಮಾಡುತ್ತಿದ್ದೇನೆ.

ನಮ್ಮ ಜಿಲ್ಲೆ ಕೃಷಿ ಕ್ಷೇತ್ರಕ್ಕೆ ಸ್ವಾತಂತ್ರ್ಯ ಪೂರ್ವದಿಂದಲೂ ಹೆಚ್ಚಿನ ಆದ್ಯತೆ ನೀಡುತ್ತಾ ಬಂದಿದೆ. ಆದರೆ, ಈವರೆಗೂ ಜಿಲ್ಲೆಯಿಂದ ಯಾರೂ ಕೃಷಿ ಸಚಿವರಾಗಿರಲಿಲ್ಲ. ನನಗೆ ಲಭಿಸಿರುವ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು, ಜಿಲ್ಲೆಯ ರೈತ ಸಮುದಾಯವನ್ನು ಸಬಲೀಕರಣಗೊಳಿಸಬೇಕು ಹಾಗೂ ಈ ಭಾಗದ ಕೃಷಿ ವಿದ್ಯಾರ್ಥಿಗಳು ಹಾಗೂ ಅನ್ನದಾತರಿಗೆ ನೆರವಾಗಬಲ್ಲ ಕೆಲಸವನ್ನು ಮಾಡಬೇಕೆನ್ನುವ ತುಡಿತ ಜಿಲ್ಲೆಯಲ್ಲಿ ನೂತನ ಕೃಷಿ ವಿಶ್ವ ವಿದ್ಯಾಲಯವನ್ನು ನಿರ್ಮಾಣ ಮಾಡಬೇಕೆನ್ನುವ ಕನಸನ್ನು ನನಸಾಗಿಸಲು ಸಾಧ್ಯವಾಗಿಸಿತು.

ಮೈಸೂರು ವಿಭಾಗಕ್ಕೆ ಮೊದಲ ಕೃಷಿ ವಿವಿ

ಕರ್ನಾಟಕವು ಬೆಂಗಳೂರು, ಬೆಳಗಾವಿ, ಕಲಬುರ್ಗಿ ಮತ್ತು ಮೈಸೂರು ಎಂಬ 4 ಪ್ರಮುಖ ಕಂದಾಯ ವಿಭಾಗಗಳನ್ನು ಹೊಂದಿದ್ದು, ನಮ್ಮ ಮೈಸೂರು ಕಂದಾಯ ವಿಭಾಗದಲ್ಲಿ ಭಾರತದಲ್ಲಿ ಬೆಳೆಯುವ ಎಲ್ಲಾ ಕೃಷಿ ಮತ್ತು ತೋಟಗಾರಿಕೆ 'ಬೆಳೆಗಳಾದ ಭತ್ತ, ರಾಗಿ, ಕಬ್ಬು, ಜೋಳ, ಮುಸುಕಿನ ಜೋಳ, ಸಿರಿಧಾನ್ಯಗಳು, ಎಣ್ಣೆಕಾಳುಗಳು,



ಬೇಳೆಕಾಳುಗಳು, ಹತ್ತಿ, ಕಾಫಿ, ಟೀ ಮೆಣಸು, ಏಲಕ್ಕಿ, ಅಡಿಕೆ, ತೆಂಗು, ತರಕಾರಿ ಮತ್ತು ಪುಷ್ಪದ್ಯಮ ಮುಂಚೂಣಿಯಲ್ಲಿವೆ'.

ಪ್ರಸ್ತುತ ರಾಜ್ಯದಲ್ಲಿ ಮೂರು ಕೃಷಿ ವಿಶ್ವವಿದ್ಯಾನಿಲಯಗಳು (ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು, ಕೃಷಿ ವಿಶ್ವವಿದ್ಯಾಲಯ ರಾಯಚೂರು ಮತ್ತು ಕೃಷಿ ವಿಶ್ವವಿದ್ಯಾಲಯ ಧಾರಾವಾಡ), ಒಂದು ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯ (ಶಿವಮೊಗ್ಗ), ಒಂದು ತೋಟಗಾರಿಕಾ ವಿಶ್ವವಿದ್ಯಾಲಯ (ಬಾಗಲಕೋಟೆ) ಮತ್ತು ಒಂದು ಪಶುವೈದ್ಯಕೀಯ, ಪ್ರಾಣಿ ವಿಜ್ಞಾನ ಮತ್ತು ಮೀನುಗಾರಿಕೆ ವಿಶ್ವವಿದ್ಯಾಲಯ ಸೇರಿದಂತೆ ಒಟ್ಟು ಆರು ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ.

ಮೈಸೂರು ಕಂದಾಯ ವಿಭಾಗವನ್ನು ಹೊರತುಪಡಿಸಿ, ರಾಜ್ಯದ ಎಲ್ಲಾ ಕಂದಾಯ ವಿಭಾಗಗಳಲ್ಲಿಯೂ ಕೃಷಿ ವಿಶ್ವ ವಿದ್ಯಾಲಯಗಳಿವೆ ಲಭ್ಯತೆಯಿದೆ. ಈ ಸಂಗತಿಯನ್ನು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಾಗೂ ಮಾನ್ಯ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಗಮನಕ್ಕೆ ತಂದಾಗ ಸಂತೋಷದಿಂದ ಒಪ್ಪಿಕೊಂಡರು. ಮಂಡ್ಯದಲ್ಲಿ ನೂತನವಾಗಿ ಸಮಗ್ರ ಕೃಷಿ ವಿಶ್ವ ವಿದ್ಯಾಲಯ ಸ್ಥಾಪನೆಗೆ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿ, ಈ ಬಾರಿಯ ಬಜೆಟ್‌ನಲ್ಲಿ ₹25 ಕೋಟಿ ಅನುದಾನವನ್ನೂ ಸಹ ಮೀಸಲಿಡಲಾಗಿದೆ.

ಕೃಷಿ ಸಂಶೋಧನೆಯ ಇತಿಹಾಸ

ಕೃಷಿ ಸಂಶೋಧನೆಯಲ್ಲಿ ನಮ್ಮ ಮಂಡ್ಯ ಜಿಲ್ಲೆಗೆ ಸ್ವಾತಂತ್ರ್ಯ ಪೂರ್ವದ ಇತಿಹಾಸವಿದೆ. 1931ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕೃಷಿ ಸಂಶೋಧನಾ ಕೇಂದ್ರ ಸ್ಥಾಪನೆಗೆ ಜಮೀನನ್ನು ನೀಡಿದ್ದರು. ಈ ಕೇಂದ್ರವು 1931ರಲ್ಲಿ ಮಂಡ್ಯದ ವಿ.ಸಿ.ಫಾರಂನಲ್ಲಿ ಕಬ್ಬು ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ದಕ್ಷಿಣ ಕರ್ನಾಟಕದ ರೈತಾಪಿ ವರ್ಗದ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಬಳಿಕ ಈ ಕೇಂದ್ರದಲ್ಲಿ ವಲಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ಮಹಾವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಈ ಕೇಂದ್ರದ ವ್ಯಾಪ್ತಿಗೆ ಮಂಡ್ಯ ಜಿಲ್ಲೆಯ ಏಳು ತಾಲೂಕುಗಳು, ಮೈಸೂರು ಜಿಲ್ಲೆಯ ನಾಲ್ಕು ತಾಲೂಕುಗಳು, ಚಾಮರಾಜನಗರ ಜಿಲ್ಲೆಯ ಐದು ತಾಲೂಕುಗಳು, ತುಮಕೂರು ಜಿಲ್ಲೆಯ ಮೂರು ತಾಲೂಕುಗಳು, ಚಾಮರಾಜನಗರ ಜಿಲ್ಲೆಯ ಐದು ತಾಲೂಕುಗಳು, ಹಾಗೂ ಹಾಸನ ಜಿಲ್ಲೆಯ ಮೂರು ತಾಲೂಕುಗಳು ಸೇರಿವೆ.

2025ನೇ ಸಾಲಿನ ಮಂಡ್ಯ ಕೃಷಿ ವಿಜ್ಞಾನಗಳ (ತಿದ್ದುಪಡಿ) ವಿಶ್ವವಿದ್ಯಾಲಯಗಳ ವಿಧೇಯಕವನ್ನು ಉಭಯ ಸದನಗಳಲ್ಲಿ ಮಂಡಿಸಿ, ಅಧಿಕೃತವಾಗಿ ಅಂಗೀಕರಿಸುವ ಮೂಲಕ ಮಂಡ್ಯ ಕೃಷಿ ವಿಶ್ವವಿದ್ಯಾಲಯಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ದಿನ ನನ್ನ ಜೀವನದ ಅತ್ಯಂತ ಸಂಭ್ರಮದ ಕ್ಷಣವಾಗಿದೆ. ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳು 2025ನೇ ಸಾಲಿನ ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕಕ್ಕೆ ಅನುಮೋದನೆ ನೀಡಿದ್ದು ನನಗೆ ಅಪಾರ ಹರ್ಷ ಮತ್ತು ಆನಂದವನ್ನು ಉಂಟುಮಾಡಿದೆ.

ನನ್ನ ಜನ್ಮಭೂಮಿ, ನನ್ನ ಊರು ಮಂಡ್ಯ – ಕಾವೇರಿ ಜಲಾನಯನ ಪ್ರದೇಶದಲ್ಲಿ ಇರುವ ಈ ಪುಣ್ಯ ಭೂಮಿಯು ಕೃಷಿ ಕ್ಷೇತ್ರದಲ್ಲಿ ದೇಶಕ್ಕೇ ಮಾದರಿಯಾಗಬೇಕು ಎಂಬುದು ನನ್ನ ಜೀವನದ ಮಹತ್ವದ ಕನಸಾಗಿತ್ತು. ಆ ಕನಸು ಇಂದು ನನಸಾಗುವ ಹಾದಿಯಲ್ಲಿ ಸಾಗುತ್ತಿದೆ ಎನ್ನುವ ಸಮಾಧಾನಕ್ಕಿಂತ ಸಾಗಬೇಕಾದ ದೂರ ಬಹಳಷ್ಟಿದೆ ಎನ್ನುವ ಆಲೋಚನೆ ನನ್ನನ್ನು ಇನ್ನಷ್ಟು ಕಾರ್ಯಪ್ರವೃತ್ತನಾಗಿಸುತ್ತಿದೆ.

ಸಾವಯವ ಕೃಷಿಗೆ ಆದ್ಯತೆ

ಜಿಲ್ಲೆಯಲ್ಲಿ ಒಂದು ಕೃಷಿ ವಿಶ್ವವಿದ್ಯಾಲಯ ನಿರ್ಮಾಣ ಮಾಡಬೇಕು ಎನ್ನುವ ನನ್ನ ಕನಸು ಹಾಗೂ ನನ್ನ ಜನತೆಯ ಬಹು ಕಾಲದ ಬೇಡಿಕೆ ಈಡೇರುತ್ತಿದೆ. ನನ್ನ ಮಂಡ್ಯ ಜಿಲ್ಲೆಯ ಜನತೆ ಹಾಗೂ ರಾಜ್ಯದ ಎಲ್ಲಾ ಕೃಷಿಕರ ಅಭ್ಯುದಯದ ಗುರಿಯೊಂದಿಗೆ ಈ ಕೃಷಿ ವಿಶ್ವವಿದ್ಯಾಲಯ ಕಾರ್ಯ ನಿರ್ವಹಿಸಲಿದ್ದು, ಕೃಷಿಯಲ್ಲಿ ನಾವೀನ್ಯತೆಯನ್ನು ಕಂಡುಕೊಳ್ಳಲು, ವಿಜ್ಞಾನವನ್ನು ಅಳವಡಿಸಲು, ಮುಂದಿನ ಪೀಳಿಗೆಗೆ ಕೃಷಿ ಕ್ಷೇತ್ರದ ಬಗ್ಗೆ ಇನ್ನೂ ಹೆಚ್ಚಿನ ಒಲವನ್ನು ಬೆಳೆಸಲು ನೆರವಾಗಲಿದೆ.

ನಾನು ಕೃಷಿ ಸಚಿವನಾದ ಬಳಿಕ ನಾಡಿನಾದ್ಯಂತ ಸಂಚರಿಸಿ, ಪ್ರಗತಿ ಪರ ರೈತರ ಜೊತೆ ಸಂವಾದ ನಡೆಸಿದ್ದೇನೆ. ಸಮಗ್ರ ಕೃಷಿ, ಸಾವಯವ ಕೃಷಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದ್ದು, ಕೃಷಿ ವಿಶ್ವ ವಿದ್ಯಾಲಯಗಳೊಂದಿಗೆ ರೈತರೊಂದಿಗೆ ಸಂಪರ್ಕ ಕಲ್ಪಿಸುವ ಜೊತೆ ಸಂಶೋಧನೆಗೆ ಹೆಚ್ಚಿನ ಅವಕಾಶ ಸೃಷ್ಟಿಸಲಾಗುತ್ತಿದೆ.

ಹಾಗೆಯೇ, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಖಾಸಗಿ ಕೃಷಿ ಕಾಲೇಜು ಸ್ಥಾಪನೆಗೆ ಒಪ್ಪಿಗೆ ನೀಡಲಾಗಿದೆ. ರಾಮನಗರ ಜಿಲ್ಲೆ ಕನಕಪುರದ ಎಸ್.ಕರಿಯಪ್ಪ ಕೃಷಿ ಕಾಲೇಜು ಹಾಗೂ ಮಂಡ್ಯದ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ಗೆ 2024 – 25ನೇ ಶೈಕ್ಷಣಿಕ ವರ್ಷದಿಂದ ಕೃಷಿ ವಿಜ್ಞಾನ ಕಾಲೇಜುಗಳನ್ನು ಆರಂಭಿಸಲು ಅನುಮತಿ ನೀಡಲಾಗಿದೆ.

ಕೃಷಿ ಪರಂಪರೆಗೆ ಹೆಸರಾಗಿರುವ ನಮ್ಮ ಮಂಡ್ಯ ಜಿಲ್ಲೆಯಿಂದ ಪ್ರಪ್ರಥಮ ಬಾರಿಗೆ ಕೃಷಿ ಸಚಿವನಾಗಿ ಆಯ್ಕೆಯಾಗಿ ಇಂತಹ ಒಂದು ಸತ್ಕಾರ್ಯ ಮಾಡುವ ಸದವಕಾಶ ದೊರಕಿರುವುದು ನನ್ನ ಸೌಭಾಗ್ಯ. ನನ್ನ ಮಂಡ್ಯ ಜನತೆಯ ಸೇವೆಗೆ ನನ್ನ ಬದ್ಧತೆ ನಿರಂತರವಾಗಿರಲಿದೆ. ಈ ಮಣ್ಣಿನ ಋಣಸಂದಾಯದ ಭಾಗ್ಯ ನನ್ನದಾಗಿದೆ. ನಮ್ಮ ಮಂಡ್ಯದ ಹಾಗೂ ನಾಡಿನ ಅನ್ನದಾತರ ಶ್ರೇಯೋಭಿವೃದ್ಧಿಗೆ ನನ್ನ ಶ್ರಮ ನಿರಂತರವಾಗಿರಲಿದೆ. ಕೃಷಿ ಕುಟುಂಬದ ಜೀವನ ಹಸನಾಗಿಸಲು ನಮ್ಮ ಸರ್ಕಾರ ಹಾಗೂ ಕೃಷಿ ಇಲಾಖೆ ಸದಾ ನಿಮ್ಮೊಂದಿಗಿದೆ.

Kannadaprabha pg 12

ವಿ ರೈತ ಮಿತ್ರ



■ಹಲಸಿನ ಮರದ ತುದಿಯ ರೆಂಬೆಗಳಲ್ಲಿ ಎಲೆಗಳು ಹಳದಿಯಾಗಿ ಉದುರುತ್ತಿವೆ, ಇದಕ್ಕೆ ಕಾರಣ ಮತ್ತು ಪರಿಹಾರ ತಿಳಿಸಿ.

| ಸುಜನ್ ಮಂಗಳೂರು

ಹಲಸಿನ ಹಣ್ಣನ್ನು ನೇರ ಸೇವನೆಗೆ ಮತ್ತು ಕಾಯಿಗಳನ್ನು ಅಡುಗೆಗೆ ಉಪಯೋಗಿಸುತ್ತಾರೆ. ಇದು ಮಲೆನಾಡು ಮತ್ತು ಕರಾವಳಿ ಪ್ರದೇಶಗಳಿಗೆ ಸೂಕ್ತವಾಗಿದ್ದು, ಇನ್ನುಳಿದ ಪ್ರದೇಶಗಳಲ್ಲಿ ಕೂಡ ಸಾಧಾರಣವಾದ ಇಳುವರಿ ಬರುತ್ತದೆ. ಹಲಸಿನಲ್ಲಿ ಕಾಂಡ ಒಣಗುವ ರೋಗ ಕಂಡುಬಂದಲ್ಲಿ ಮರದ ತುದಿಯ ರೆಂಬೆಗಳಲ್ಲಿ ಎಲೆಗಳು ಹಳದಿಯಾಗಿ ಉದುರಲು ಪ್ರಾರಂಭಿಸುತ್ತವೆ. ಕಾಂಡದ ತೊಗಟೆಯ ಮೇಲೆ ಕಂದು ಬಣ್ಣದ ತೇಪೆಗಳು ಕಂಡುಬಂದು ಕಾಂಡವು ಒಣಗಲು ಪ್ರಾರಂಭಿಸುತ್ತದೆ. ರೋಗ ಹೆಚ್ಚಾದಲ್ಲಿ ಮರ ಸಂಪೂರ್ಣ ಒಣಗಿ ಸಾಯುತ್ತದೆ. ನಿರ್ವಹಣೆ: ಒಣಗಿದ ಭಾಗವನ್ನು ಕತ್ತರಿಸುವುದು, ನಂತರ ಪ್ರತಿ ಲೀಟರ್ ನೀರಿಗೆ ತಾಮ್ರದ ಆಕ್ಸಿ ಕ್ಲೋರೈಡ್ 50 ಡಬ್ಲೂ.ಪಿ 3.0 ಗ್ರಾಂ ಅಥವಾ ಕಾರ್ಬನ್‌ಡೈಜಿಮ್ 50 ಡಬ್ಲೂ.ಪಿ 1.0 ಗ್ರಾಂ ನಂತೆ ಬೆರೆಸಿ ಸಿಂಪಡಿಸುವುದು. ಈ ಸಿಂಪಡಣೆಯನ್ನು ರೋಗಕ್ಕೆ ತುತ್ತಾದ ಗಿಡಗಳಿಗೆ ಮಾತ್ರ ಮೇ-ಜೂನ್ ತಿಂಗಳಲ್ಲಿ ಕೈಗೊಳ್ಳಬೇಕು.

| ಡಾ. ಕೆ.ಪಲ್ಲವಿ ಸಸ್ಯ ಸಂರಕ್ಷಣಾ ತಜ್ಞರು

Vijayavani pg 07

For more information visit
University Library Website
Web - uasbagrilibindia.org
E-mail- librarian@uasbangalore.edu.in

Coffee Santhe in Bengaluru brews strong support for women

Dec Hrd Pg 02

Experts discuss innovation, impact of climate change

ANUPAMA MANI
BENGALURU, DHNS

The Bangalore-based Women's Coffee Alliance – India (WCAI), the India chapter of International Women's Coffee Alliance (IWCA) commenced the seventh edition of their 'Coffee Santhe,' a three-day event on Friday at Freedom Park.

The Coffee Santhe serves as WCAI's primary fundraising event to empower women coffee plantation workers with a 'coffee twist' every year.

WCAI Secretary, Poornima Jairaj spoke about the organisation's commitment to empowering women plantation workers. She specified how farmers are entering roasting, retail, and cafe ownership - bridging the gap from farm to cup. Home brewing is also on the rise, with consumers opting for freshly ground beans, reflecting India's evolving coffee culture.



The Women's Coffee Alliance-India launches the spirited seventh 'Coffee Santhe' at Freedom Park on Friday.
DH PHOTO/KISHOR KUMAR BOLAR

The event provided a platform for various perspectives from coffee brands, artists and enthusiasts. "Indians are ready for high-quality coffee," said Rohan Mammen from Badra Coffee.

"India is known as a tea-drinking nation, but with the cafe culture coming up - as people work and meet in cafes, India is seeing development in coffee production," he added.

"There is also a growing trend of traceability and sustainability, with consumers seeking about the origins of the coffee, and stories behind the production of it," stated Mammen.

Harsha M from Cothas Coffee explained how they introduced varieties like cold coffee, milkshakes, vending machines and small gadgets adhering to the likes of GenZ.

"When we sell, our distributors are all women entrepreneurs - you won't find us on Swiggy, Instamart, Zomato, or Zepto," stated Madras Kaapi Club.

They also expressed concern over the impact of climate change on coffee production, noting, "With so much climate change happening, we don't know if traditional coffee-growing regions will continue to yield the same produce."

The highlights of the event include Women Stars Brewing Championship, Robusta Brewer Skills Championship with an international panel of judges, Cheers to Coffee and a cupping event along with entertainment, staging performances of Saroj Kashyap, Padmini Ravi, Navin DJ, Table for 4 Band, live art, coffee wordle and other games.

ವಿಶ್ವದ ದುಬಾರಿ ಮಾವಿನ ಹಣ್ಣು ಎಗ್ ಆಫ್ ದ ಸನ್

ಕೆಜಿಗೆ ಮೂರು ಲಕ್ಷ ರೂ. ಬೆಲೆ ಇರುವ ವಿಶ್ವದ ಅತ್ಯಂತ ದುಬಾರಿ ಮಾವಿನ ಹಣ್ಣು ಸಿಹಿಯಾದ ರುಚಿಯೊಂದಿಗೆ ಮಾವಿನ ಈ ಸೀಸನ್‌ನಲ್ಲಿ ಮತ್ತೊಮ್ಮೆ ಸದ್ದು ಮಾಡಿದೆ.



ಎಗ್ ಆಫ್ ದ ಸನ್ ಎಂದು ಕರೆಯಲ್ಪಡುವ ಅಪರೂಪದ ಮಿಯಾಝಾಕಿ ಮಾವು ವಿಶ್ವದ ಅತ್ಯಂತ ದುಬಾರಿ ಮಾವಿನ ಹಣ್ಣು ಎಂಬ ಖ್ಯಾತಿಯನ್ನು ಗಳಿಸಿದ್ದು, ಇದೀಗ ಸದ್ದು ಮಾಡುತ್ತಿದೆ. ಇದರ ಬೆಲೆ ಕೆಜಿಗೆ ಮೂರು ಲಕ್ಷ ರೂ. ಎನ್ನಲಾಗಿದ್ದು, ಅತ್ಯುತ್ತಮ ಗುಣಮಟ್ಟವನ್ನು ಹೊಂದಿರುವ ಈ ಮಾವು ಐಷಾರಾಮಿ ಸಂಕೇತ. ಆಗಾಗ ಸುದ್ದಿಯಾಗುವ ಈ ದುಬಾರಿ ಹಣ್ಣು ತನ್ನ ಬೆಲೆಯಿಂದಲೇ ಸೆಳೆಯುತ್ತದೆ.

ಈ ಹಣ್ಣು ರೂಬಿ ರೆಡ್ ಬಣ್ಣವನ್ನು ಹೊಂದಿರುವುದರಿಂದ ಇದು ಎಗ್ ಆಫ್ ದ ಸನ್ ಎಂಬ ಬಿರುದನ್ನು ಗಳಿಸಿದೆ. ಜಪಾನ್‌ನ ಮಿಯಾಝಾಕಿ ಪ್ರಾಂತ್ಯದಲ್ಲಿ ಬೆಳೆಸಲಾದ ಈ ಹಣ್ಣು ಸಿಹಿ ರುಚಿ ಮತ್ತು ನಯವಾದ ವಿನ್ಯಾಸದ ಮೂಲಕ ಹೆಚ್ಚು ಆಕರ್ಷಕ ಎನಿಸಿದೆ.

20ನೇ ಶತಮಾನದ ಮಧ್ಯಭಾಗದಲ್ಲಿ ಅಲ್ಲಿನ ವಿಶಿಷ್ಟ ಹವಾಮಾನಕ್ಕೆ ಸರಿಹೊಂದುವಂತೆ ಆಯ್ದ ತಳಿ ಬಳಸಿಕೊಂಡು ಕಠಿಣ ಪರಿಶ್ರಮದಿಂದ ಅಭಿವೃದ್ಧಿಪಡಿಸಲಾಗಿದೆ.

ಪ್ರತಿ ಹಣ್ಣಿನ ತೂಕ 350 ರಿಂದ 550 ಗ್ರಾಂನಷ್ಟು ಇರುತ್ತದೆ. ನಾರುಗಳನ್ನು ಹೊಂದಿರದ ಉತ್ತಮ ಸಕ್ಕರೆ ಅಂಶವನ್ನು ಒಳಗೊಂಡಿರುವ ಈ ಮಾವಿನ ಸುಗಂಧವೂ ಆಹ್ಲಾದಕರವಾಗಿದೆ. ಕೆಲವು ಕೃಷಿಕರು ಈ ಬಗೆಯ ಮಾವಿನ ಗಿಡವನ್ನು ಬೆಳೆಸಿ ಪ್ರಯೋಗ ಮಾಡಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಆಗಾಗ ಕಾಣಿಸಿಕೊಳ್ಳುವ ಇದರತ್ತ ಆಕರ್ಷಿತರಾಗಿ ರುಚಿ ನೋಡಬೇಕು ಎಂದುಕೊಳ್ಳುವವರಿಗೆ ಈ ಮಾವು ಇತರೇ ತಳಿಯ ಮಾವಿನ ಹಣ್ಣುಗಳಂತೆ ಸಾರ್ವಜನಿಕವಾಗಿ ಅಥವಾ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ■

V-karnataka add Pg 02

ರೈತನ ಮಗಳಿಗೆ 15 ಚಿನ್ನದ ಪದಕ

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ನಾಗೇನಹಳ್ಳಿಯ ರವೀನಾ ಸಾಧನೆ

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ನಾಗೇನಹಳ್ಳಿ ಗ್ರಾಮದ ರೈತನ ಮಗಳಾದ ರವೀನಾ ಅವರು 'ಬ್ಯಾಚುಲರ್ ಆಫ್ ವೆಟರ್ನರಿ ಸೈನ್ಸ್ ಅಂಡ್ ಅನಿಮಲ್ ಹಸ್ಬೆಂಡ್ರಿ' (ಬಿವಿಎಸ್‌ಸಿ ಅಂಡ್ ಎಎಚ್) ಸ್ನಾತಕ ಪದವಿಯಲ್ಲಿ 15 ಚಿನ್ನದ ಪದಕಗಳ ಸಾಧನೆ ಮಾಡಿದ್ದಾರೆ.

ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಬೆಂಗಳೂರಿನ ಪಶು ವಿ.ವಿ. ಕಾಲೇಜಿನ ವಿದ್ಯಾರ್ಥಿನಿ ರವೀನಾ, 2022-23ನೇ ಸಾಲಿನಲ್ಲಿ ಈ ಸಾಧನೆ ತೋರಿದ್ದಾರೆ.

ಪಶು ವಿ.ವಿ.ಯ 20 ವರ್ಷಗಳ ಇತಿಹಾಸದಲ್ಲಿ ಒಬ್ಬ ವಿದ್ಯಾರ್ಥಿ 16 ಚಿನ್ನದ ಪದಕ, ಇಬ್ಬರು 15 ಚಿನ್ನದ ಪದಕಗಳಿಗೆ ಪಾತ್ರರಾಗಿದ್ದಾರೆ. ಆ ಸಾಲಿಗೆ ಈಗ ರವೀನಾ ಹೊಸ ಸೇರ್ಪಡೆ.

ರವೀನಾ ಅವರ ತಂದೆ ಕುಮಾರ ಕೃಷಿಕರು. ಎರಡು ಎಕರೆ ಜಮೀನಿನಲ್ಲಿ ಕಷ್ಟಪಟ್ಟು ಉಳುಮೆ ಮಾಡಿ, ಅದರಲ್ಲಿ ಬಂದ ಆದಾಯದಿಂದ ಇರುವ ಒಬ್ಬ ಮಗಳಿಗೆ ಉತ್ತಮ ಶಿಕ್ಷಣ ಕೊಡಿಸಿದ್ದಾರೆ. ತಂದೆಯ ನಿರೀಕ್ಷೆಗೆ ತಕ್ಕಂತೆ ಓದುವುದರ ಮೂಲಕ ಮಗಳು ಚಿನ್ನದ ಪದಕಗಳಿಗೆ ಕೊರಳೊಡ್ಡಲಿದ್ದಾರೆ.

ರವೀನಾ ಅವರು ಪಿಯುನಲ್ಲಿ ಓದುತ್ತಿರುವಾಗ ಅವರ ತಾಯಿ ಸಾಕಮ್ಮ ನಿಧನ ಹೊಂದಿದ್ದರು. ಮಗಳಿಗೆ ತಾಯಿಯ ಕೊರತೆ ಕಾಡದಂತೆ ನೋಡಿಕೊಂಡಿದ್ದರು. ತಂದೆ ಹಾಗೂ ಸಹೋದರ ಸಂಬಂಧಿಗಳು ಬೆಂಬಲವಾಗಿ ನಿಂತಿದ್ದರಿಂದ ಅವರ ಉನ್ನತ ಶಿಕ್ಷಣಕ್ಕೆ ಯಾವುದೇ ತೊಡಕಾಗಲಿಲ್ಲ.



ಹೆಚ್ಚಿನವರಿಗೆ ಮೆಡಿಕಲ್, ಎಂಜಿನಿಯರಿಂಗ್ ಅಂದ್ರೆ ಇಷ್ಟ. ನನಗೆ ಪ್ರಾಣಿಗಳೆಂದರೆ ಇಷ್ಟ. ಹೀಗಾಗಿ ವೆಟರ್ನರಿ ಸೈನ್ಸ್ ಆಯ್ಕೆ ಮಾಡಿಕೊಂಡೆ
ರವೀನಾ ಕೆ.ಎಸ್.
ಚಿನ್ನದ ಪದಕ ಪಡೆದ ವಿದ್ಯಾರ್ಥಿನಿ

'ನಾನು ಸೇರಿದ ಕೋರ್ಸ್ ಐದೂವರೆ ವರ್ಷಗಳದ್ದು. ಕೋವಿಡ್‌ನಿಂದಾಗಿ ಅರು ವರ್ಷಕ್ಕೆ ವಿಸ್ತರಣೆಯಾಗಿತ್ತು. ಕೋವಿಡ್‌ನಿಂದ ಎರಡನೇ ಮತ್ತು ಮೂರನೇ ವರ್ಷ ಬಹಳ ಕಠಿಣ ಸಮಯ ಅಂತ ಹೇಳಬಹುದು. ಆದರೆ, ಧೃತಿಗೆಡದೇ ಓದಿದೆ. ಆನಂತರ ಎಲ್ಲ ಸಹಜವಾದ ನಂತರ ನಿತ್ಯ ತರಗತಿಗಳಿಗೆ ಹಾಜರಾಗಿ, ಅಂದಿನ ಪಾಠ ಅಂದೇ ಓದು ಮುಗಿಸುತ್ತಿದ್ದೆ. ಪರೀಕ್ಷೆ ಸುಲಭವಾಗಿ ಎದುರಿಸಲು ಇದು ಸಹಾಯವಾಯಿತು' ಎಂದು ರವೀನಾ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ವೆಟರ್ನರಿ ಸೈನ್ಸ್ ಕೋರ್ಸ್, ಕೃಷಿ ಹಾಗೂ ಪ್ರಾಣಿಗಳಿಗೆ ಸಂಬಂಧಿಸಿರುವ ಕಾರಣ ಇದನ್ನು ಇಷ್ಟಪಟ್ಟು ಆಯ್ಕೆ ಮಾಡಿಕೊಂಡೆ. ನಮಗೆ ಯಾವುದರಲ್ಲಿ ಇಷ್ಟವಿರುತ್ತೋ ಅದನ್ನೇ ಆಯ್ಕೆ ಮಾಡಿಕೊಳ್ಳಬೇಕು. ನನ್ನ ಓದಿಗೆ ಯಾವುದೇ ತೊಡಕಾಗದಂತೆ ತಂದೆ ನೋಡಿಕೊಂಡರು' ಎಂದು ನೆನೆದರು.

ರವೀನಾ ಅವರ ಸಹಪಾಠಿ ಬೆಂಗಳೂರಿನ ಜೆ.ಪಿ. ನಗರದ ಆದಿತ್ಯ ಚಿದಾನಂದ ಈಶ್ವರಲ ಅವರು 9 ಚಿನ್ನದ ಪದಕಗಳಿಗೆ ಪಾತ್ರರಾಗಿದ್ದಾರೆ. ಇದೇ ಕೋರ್ಸ್‌ನಲ್ಲಿ ಯಾದಗಿರಿ ಜಿಲ್ಲೆ ನಾರಾಯಣಪುರದ ಭಾಗ್ಯಶ್ರೀ ಹಾಗೂ ಶಿವಮೊಗ್ಗದ ವಿಶ್ವಾಸ ಬಿ. ಅವರು ತಲಾ ನಾಲ್ಕು ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

Prajavani Pg 07

25ಕ್ಕೆ ಪಶು ವಿ.ವಿ. ಘಟಿಕೋತ್ಸವ

ಬೀದರ್‌ನಲ್ಲಿರುವ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವ ಮಾ. 25ರಂದು ಬೆಳಿಗ್ಗೆ 11ಕ್ಕೆ ಜರುಗಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು 2022-23ನೇ ಸಾಲಿನ 16 ಸ್ನಾತಕ ಪದವೀಧರರಿಗೆ 53 ಚಿನ್ನದ ಪದಕ, ಸ್ನಾತಕೋತ್ತರ ಪದವಿ ಪೂರೈಸಿದ 21 ವಿದ್ಯಾರ್ಥಿಗಳಿಗೆ 34 ಚಿನ್ನದ ಪದಕ, ಡಾಕ್ಟರೇಟ್ ಪದವಿ ಮುಗಿಸಿರುವ 7 ವಿದ್ಯಾರ್ಥಿಗಳಿಗೆ ತಲಾ ಒಂದು ಚಿನ್ನದ ಪದಕ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ತೋರಿದ ಇಬ್ಬರಿಗೆ ತಲಾ ಒಂದು ಚಿನ್ನದ ಪದಕ, ಪದವಿ ಪ್ರದಾನ ಮಾಡಲಿದ್ದಾರೆ. ಪುಣೆಯ ರಾಷ್ಟ್ರೀಯ ವೈರಾಲಜಿ ಸಂಸ್ಥೆ ನಿರ್ದೇಶಕ ಡಾ. ನವೀನಕುಮಾರ ಘಟಿಕೋತ್ಸವ ಭಾಷಣ ಮಾಡುವರು. ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ಆಗಮಿಸುವರು ಎಂದು ವಿ.ವಿ. ಕುಲಪತಿ ಪ್ರೊ.ಕೆ.ಸಿ. ವೀರಣ್ಣ ಶುಕ್ರವಾರ ತಿಳಿಸಿದರು.

ಪಿಜಿಯಲ್ಲಿ ದಕ್ಷೀತ್‌ಗೆ 6 ಚಿನ್ನದ ಪದಕ



ದಕ್ಷೀತ್ ಪಿ.ಎಲ್.

ಚಿತ್ರದುರ್ಗದ ಚಳ್ಳಕೆರೆಯ ಚಿಕ್ಕೇನಹಳ್ಳಿ ಗ್ರಾಮದ ದಕ್ಷೀತ್ ಪಿ.ಎಲ್. ಅವರು ಎಂವಿಎಸ್‌ಸಿ ಸ್ನಾತಕೋತ್ತರ ಪದವಿಯಲ್ಲಿ ಆರು ಚಿನ್ನದ ಪದಕಗಳನ್ನು ಗಳಿಸಿದ್ದಾರೆ.

ಇವರು ಬೆಂಗಳೂರಿನ ಪಶು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಯಾಗಿದ್ದು, 2022-23ನೇ ಸಾಲಿನಲ್ಲಿ ಈ ಸಾಧನೆ ಮಾಡಿದ್ದಾರೆ. ಸದ್ಯ ಬೆಂಗಳೂರಿನ ಪಶು ವಿ.ವಿ.ಯಲ್ಲೇ ಪಿಎಚ್.ಡಿ ಅಧ್ಯಯನ ಮಾಡುತ್ತಿದ್ದಾರೆ. 'ಪೋಷಕರ ಬೆಂಬಲ, ನಾನು ಮನಸ್ಸಿಟ್ಟು ಓದಿದ ಕಾರಣ ಉತ್ತಮ ಫಲಿತಾಂಶ ಬಂದಿದೆ. ಈ ಕೋರ್ಸ್ ಇಷ್ಟಪಟ್ಟು ಆಯ್ಕೆ ಮಾಡಿಕೊಂಡಿದ್ದೆ. ಪಶು ವೈದ್ಯಕೀಯ ವಿಜ್ಞಾನ ಕ್ಷೇತ್ರದಲ್ಲಿ ಭವಿಷ್ಯದ ದಿನಗಳಲ್ಲಿ ಸಾಕಷ್ಟು ಬೆಲೆ ಇದೆ' ಎಂದು ದಕ್ಷೀತ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

There is progress on GM food crops, says official

Remark comes amid apprehensions over the Environment Ministry's approval for commercial cultivation of GM mustard in 2022; Supreme Court is set to hear pleas on the same next month

Jacob Koshy
NEW DELHI

Ahead of a fresh series of hearings in the Supreme Court next month over genetically modified (GM) food crops, the Department of Biotechnology (DBT) said there was "progress" on this front.

"The matter is *sub judice* but GM mustard stories are being taken up again," DBT Secretary Rajesh Gokhale said at a biotechnology event on Friday. The DBT, which has for years funded research and development into transgenic and GM food crops, comes under the Ministry of Science and Technology.

At present, Bt cotton is the only genetically modified crop allowed to be cultivated. Though the Environment Ministry gave its conditional go-ahead for commercial cultivation of GM mustard in 2022, it has not taken off as it was challenged in the Supreme Court.

Science Minister Jitendra Singh who was also at the event, said, "There is so much dynamism in bio-technology development that we cannot look at tomorrow through the prism of today."



Awaiting hearing: Petitioners have challenged the Environment Ministry's approval for cultivation of GM mustard. R.V. MOORTHY

Hearing from April 15

On March 6, a three-judge Bench of the Supreme Court said it will begin hearing from April 15 petitions challenging the Environment Ministry's approval for cultivation of GM mustard. The court has told all parties to file their written submissions within a week.

A two-judge Bench of the top court, on July 23, 2024, gave a split verdict on the validity of the Centre's 2022 decision granting conditional approval for the environmental release of GM mustard crop. However, it also directed the Centre to formulate a "national policy" on GM crops. Mr. Gokhale told *The Hindu* that the DBT had provided "technical inputs" to the Union Environment Ministry, which was formulating the policy and was the "nodal coordinator".

Safety concerns

GM mustard, developed using public funds, was the first transgenic food crop to be approved for farmer fields by the Genetic Engineering Appraisal Committee, a scientific body. However, it wasn't approved for cultivation following safety objections by activist groups.

However, the use of biotechnology to improve food crops – as in the case of GM mustard – is a key focus of the government's BioE3 policy.

This involves manufacturing new kinds of enzymes, pharmacueticals and agricultural products while applying techniques, including genetic engineering.

A report released by the DBT at the event on Friday on the current state of India's 'bio-economy' says that bio-agriculture accounts for 8.1% – the smallest share – of the $165.7 billion bio-economy in India.

"Valued at $13.5 billion, this segment enhances agricultural productivity and resilience through genetically modified crops like Bt Cotton and precision agriculture technologies," the report notes.

Hindu Pg 07